**ಜೈನ್‌ಕಾಲೇಜ್, ಜಯನಗರ, ಬೆಂಗಳೂರು–೫೬೦೦೬೯.**

**ಪ್ರಥಮ ಪಿ.ಯು.ಸಿ. ಮಾದರಿ ಸಿದ್ಧತಾ ಪರೀಕ್ಷೆ–ಜನವರಿ ೨೦೧೭**

**ಸಮಯ– ೩.೧೫ ಘಂಟೆ** | **ವಿಷಯ: ಕನ್ನಡ** | **ಅಂಕಗಳು –೧೦೦**

---

**I. ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.** ೧X೧೦=೧೦

೧. ಕಟ್ಟೋಗರದ ಮೊಟ್ಟೆಯನ್ನುಎಲ್ಲಿಕಟ್ಟಲಾಗಿದೆ?
೨. ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ?
೩. ನಾಡುಯಾವುದಕ್ಕೆ ತಾಳ ಹೊಡೆದಿದೆ?
೪. ಅಮ್ಮಿಏನನ್ನು ಪಾಲು ಮಾಡಿದಂತೆ ಬಟ್ಟೆ ಕತ್ತರಿಸುತ್ತಾಳೆ?
೫. ಹುಡುಗನಿಗೆ ಮಹಾತ್ಮಗಾಂಧಿ ಎಂಬ ಹೆಸರನ್ನುಇಟ್ಟವರುಯಾರು?
೬. ನಿರೂಪಕರನ್ನು ರೂಪಿಸಿದ ಶಿಲ್ಪಿ ಯಾರು?
೭. ಭರತನತಂದೆಯ ಹೆಸರೇನು?
೮. ಪಿಶಾಚಿಗಳು ಮನುಷ್ಯರನ್ನುಯಾವುದರ ಮೂಲಕ ಪ್ರವೇಶಿಸುತ್ತವೆ?
೯. ಬೋಳೇಶಂಕರ ಎಲ್ಲಿ ಕುಳಿತು ಊಟ ಮಾಡಬೇಕೆಂದು ಅವನ ಅತ್ತಿಗೆ ಹೇಳುತ್ತಾಳೆ?
೧೦. ಬೋಳೇಶಂಕರನಿಂದ ಬೇರು ಕಿತ್ತುಕೊಳ್ಳಲು ಪಿಶಾಚಿಯಾವ ವೇಷದಲ್ಲಿ ಬರುತ್ತದೆ?

**ಆ–ವಿಭಾಗ**

**II. (ಅ) ಈಎಲ್ಲಾ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** ೪X೨=೮

೧೧. ಕೈಲಾಸದಲ್ಲಿಚೆನ್ನಯ್ಯನಿಗೆಯಾವ ಪದವಿ ಲಭಿಸಿತು?
೧೨. ಕಾರೆಂಬೊಕತ್ತಲಲ್ಲಿ ಎಂತಹ ಮಳೆ ಬಂತು?
೧೩. ಆಯುಷ್ಯದಚಪ್ಪರಕ್ಕೆ ಮಗು ಹೇಗೆ ಹಬ್ಬಿಕೊಳ್ಳಬೇಕು?
೧೪. ಭ್ರೂಣಾವಸ್ಥೆಯ ಮಗುವನ್ನು ಬೆನ್ನಟ್ಟಿರುವುದುಯಾವುದು?
೧೫. ಬೊಗಸೆಯಲ್ಲಿಯಾರನ್ನು ಬಂಧಿಸಲು ಕವಿ ಬಯಸಿದ್ದಾನೆ?

**(ಆ) ಈಎಲ್ಲಾ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** ೩X೨=೬

೧೬. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪಗೊಳ್ಳುತ್ತವೆ?
೧೭. ಗೌತಮನ ಮನೋಲೋಕವನ್ನು ನಿರಂತರವಾಗಿ ದಹಿಸಿದ ಪ್ರಶ್ನೆಗಳು ಯಾವುವು?
೧೮. ರೈತರ ಬದಲಿಗೆ ಸ್ವಾತಂತ್ರ್ಯವುಯಾರ ಕೈಗೆ ಸಿಕ್ಕಿತು?
೧೯. ಹುಲಿ ಕನ್ನಡಿಯಲ್ಲಿಕಂಡಿದ್ದೇನು?

**(ಇ) ಈಎಲ್ಲಾಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** ೩X೨=೬

೨೦. ಸಾವ್ಕಾರಣ್ಣನುತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ?
೨೧. ಕೋಡಂಗಿಯುತಾನು ಬೆಳಗಿನಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ?
೨೨. ಬೋಳೇಶಂಕರನು ಹುಡುಗಿಯರಿಗೆಚಿನ್ನಕೊಟ್ಟಿದ್ದಕ್ಕೆ ಸಾವ್ಕಾರಣ್ಣನು ಏನು ಹೇಳುತ್ತಾನೆ?
೨೩. ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?

**ಇ–ವಿಭಾಗ**

**III. (ಅ) ಈಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ತಿಳಿಸಿ.** ೨X೩=೬

೨೪. ನೀಂ ಕ್ರಮವಿಪರ್ಯಯಂ ಮಾಡುವುದೇ
೨೫. ಜನಕಂಗೆ ನಾವನ್ಯರಲ್ಲ
೨೬. ಪಾಪದಕೊಡತುಂಬಿದ ಜಗಪ್ರಳಯ

**(ಆ) ಈಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ತಿಳಿಸಿ.** ೧X೩=೩

೨೭. ಲೋ ಹುಡುಗ ಆ ಫೋಟೋಯಾರದಯ್ಯ
೨೮. ರೋಗನಿರೋಧಕ ಶಕ್ತಿಯೇಇರಲಿಲ್ಲ

**(ಇ) ಈಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ತಿಳಿಸಿ.** ೧X೩=೩

೨೯. ಜನಎಲ್ಲಿ ಸೇರಿದರೆಅಲ್ಲೇದರ್ಬಾರು
೩೦. ಬಂಧುಗಳೇ ಚರಿತೆ ಮುಂದೆ ಮುಂದೆ ಹೋಗುತ್ತದೆ ಹಿಂದೆ ಹಿಂದಲ್ಲ

**ಈ–ವಿಭಾಗ**

**IV.(ಅ) ಈಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** ೩X೪=೧೨

೩೧. ದುರ್ಯೋಧನರಣರಂಗದಲ್ಲಿ ನಡೆದು ಬಂದ ಬಗೆಯನ್ನು ಕವಿ ಹೇಗೆ ವರ್ಣಿಸಿದ್ದಾನೆ?

೩೨. ಸೀತೆ ಕಲ್ಮರಂಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿ.

೩೩. ಕರ್ನಾಟಕಎಂಬುದು ಬರೀ ಮಣ್ಣಿಗೆ ಹೆಸರಲ್ಲಎಂಬುದನ್ನು ಕವಿ ಹೇಗೆ ಹೇಳಿದ್ದಾರೆ?

೩೪. 'ಮತ್ತೆ ಸೂರ್ಯ ಬರುತ್ತಾನೆ' ಕವಿತೆಯಆಶಯವನ್ನು ಚರ್ಚಿಸಿ.

**(ಆ) ಈಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** ೨X೪=೮

೩೫. ಶಾಸ್ತ್ರಿ ಮಾಸ್ತರರ ವ್ಯಕ್ತಿತ್ವವನ್ನು ನಿರೂಪಿಸಿ.

೩೬. ರಂಗರಾವ್ಅಸ್ಪೃಶ್ಯರ ಶಿಕ್ಷಣಕ್ಕಾಗಿ ನೀಡಿದಕೊಡುಗೆಯೇನು? ವಿವರಿಸಿ.

೩೭. ದುಷ್ಯಂತನನ್ನು ನಿರಾಕರಿಸಲು ಶಕುಂತಲೆಕೊಡುವ ಕಾರಣಗಳನ್ನು ತಿಳಿಸಿ.

**(ಇ) ಈಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** ೨X೪=೮

೩೮. ಬೋಳೇಶಂಕರನ ಅಣ್ಣಂದಿರೇ ವಾಸಿ ಎಂದು ಪಿಶಾಚಿ ಹೇಳಲು ಕಾರಣವೇನು?

೩೯. ಬೋಳೇಶಂಕರ ತನ್ನಅಣ್ಣಂದಿರಿಗೆ ಸಿಪಾಯಿ ಮತ್ತು ನಾಣ್ಯಗಳನ್ನು ಮಾಡಿಕೊಡಲು ಏಕೆ ನಿರಾಕರಿಸುತ್ತಾನೆ?

೪೦. ಸೈನಿಕರುಏನೇನನ್ನು ನಾಶ ಮಾಡಿದರುಎಂದು ಶಿವಾಪುರದ ಜನರು ಹೇಳುತ್ತಾರೆ?

**ಉ–ವಿಭಾಗ**

**V. (ಅ) ಈ ಪದ್ಯಗಳ ಭಾವಾರ್ಥ ಬರೆಯಿರಿ.** ೧X೫=೫

೪೧. ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆಚೆನ್ನಮಲ್ಲಿಕಾರ್ಜುನ.

೪೨. ಅವ್ವಾ
ನಾ ನಿನ್ನ ಮಗಳು
ದೇಹದ ಮುಗಳು
ನಿನ್ನ ಕನಸಿನ ಅರಳವ್ವಾ
ನಾ ಬರಿ ಭ್ರೂಣವಲ್ಲ

**(ಆ) ಈಎಲ್ಲಾ ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** ೬X೨=೧೨

| | |
|---|---|
| ೪೩. ಪದಗಳ ಅರ್ಥ ಬರೆಯಿರಿ. | ತಗಹು, ಮೇಲೋಕ |
| ೪೪. ಬಿಡಿಸಿ ಬರೆಯಿರಿ. | ಅಪವಾದಮಾವರಿಸೆ, ಮೆಳ್ಳಗಣ್ಣು |
| ೪೫. ಗ್ರಾಂಥಿಕರೂಪ ಬರೆಯಿರಿ. | ಮೊಕ, ಏಗ |
| ೪೬. ಸಮನಾರ್ಥಕ ಪದಗಳನ್ನು ಬರೆಯಿರಿ. | ಭೂಮಿ, ಕಡಲು |
| ೪೭. ವಾಕ್ಯಗಳಲ್ಲಿ ಬಳಸಿ. | ಮುಖವಾಡ, ಮುಗಿಬೀಳು |
| ೪೮. ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. | ಲೌಕಿಕ, ಸಬಲ |
| ೪೯. ಕೂಡಿಸಿ ಬರೆಯಿರಿ. | ಬಾ+ಎಂದು+ಎನಗೆ, ಪುರಿ+ಕಣೆ |

**(ಇ) ಒಂದನ್ನುಕುರಿತು ಪ್ರಬಂಧ ಬರೆಯಿರಿ.** ೧X೫=೫

೫೦. ಜೈವಿಕಇಂಧನದಅವಶ್ಯಕತೆ.

೫೧. ರೈತರ ಸಮಸ್ಯೆಗಳು

**(ಈ) ಈ ಕೆಳಗಿನವುಗಳನ್ನು ಕುರಿತುಪತ್ರಲೇಖನ ಬರೆಯಿರಿ** ೧X೪=೪

೫೨. ಕಾಲೇಜಿನ ಗ್ರಂಥಾಲಯ ಸೌಲಭ್ಯದ'ಸದುಪಯೋಗವನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

೫೩. ಬೆಂಗಳೂರಿನಲ್ಲಿ ಸ್ವಚ್ಛತೆಯನ್ನು ಕಾಪಾಡುವ ಕುರಿತು ಬಿ.ಬಿ.ಎಂ.ಪಿ. ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

**(ಉ) ಈ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.** ೧X೪=೪

೫೪. ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತರುಚಿಯಿಲ್ಲ.

೫೫. ಬೆಳ್ಳಗಿರುವುದೆಲ್ಲ ಹಾಲಲ್ಲ.

******